



## ಭೇಷ್ ಹೇಳಬೇಕು

ಟೀವಿ ವಾಹಿನಿಗಳ ಬಗ್ಗೆ ಜನರ ಅಭಿಪ್ರಾಯ ಬದಲಾಗಬೇಕಾದರೆ ವಾಹಿನಿಯವರು ಜನಪರ ಕೆಲಸಗಳನ್ನು ಮಾಡಬೇಕು. ಉದಾಹರಣೆಗೆ ಪಬ್ಲಿಕ್ ಟೀವಿ 'ಜ್ಞಾನ ದೀವಿಗೆ' ಎಂಬ ಕಾರ್ಯಕ್ರಮದ ಮೂಲಕ ಸರ್ಕಾರಿ ಶಾಲೆಯ ಮಕ್ಕಳಿಗೆ ಟ್ಯಾಬ್ ಕೊಳ್ಳಲು ಧನಸಹಾಯವನ್ನು ದಾನಿಗಳಿಂದ ಸ್ವೀಕರಿಸುತ್ತಿದೆ. ಧನಸಹಾಯದ ಮಹಾಪೂರವೇ ಹರಿದು ಬರುತ್ತಿದೆ. ಇಂತಹ ಒಳ್ಳೆಯ ಕೆಲಸ ಮಾಡಿದಾಗ ನಾವು ಭೇಷ್ ಎನ್ನಲೇ ಬೇಕು ಅಲ್ಲವೇ?

—ಕೆ.ಎಸ್. ಸವಿತ, ಬೆಂಗಳೂರು

## ನೀಡಿದ್ದೇ ಮನೋರಂಜನೆ

ನಮ್ಮ ಎಲ್ಲ ಕನ್ನಡ ಚಾನಲ್‌ಗಳಲ್ಲೂ ಚಲನಚಿತ್ರಗಳ ಹಾಸ್ಯಗಳ ತುಣುಕನ್ನು ತೋರಿಸುವ ಕಾರ್ಯಕ್ರಮಗಳು ಬರುತ್ತವೆ. ನಗಲೇ ಬೇಕು, 60 ಮಿನಿಟ್ ಹಾಸ್ಯ ಹೀಗೆ ಹಲವು ಶೀರ್ಷಿಕೆಗಳಲ್ಲಿ ಬರುತ್ತವೆ. ಇವೆಲ್ಲ ನಮಗೆ ಬಲವಂತವಾಗಿ ನಗಲೇಬೇಕು ಎಂದು ಹೇಳುವಂತಿರುತ್ತದೆ. ಏಕೆಂದರೆ, ಇವುಗಳಲ್ಲಿ ಒಂದಷ್ಟು ದೃಶ್ಯಗಳನ್ನು ಕಲೆ ಹಾಕಿ ಅವುಗಳೇ ಸುತ್ತಿ ಸುತ್ತಿ ಬರುತ್ತವೆ. ಅವರ ಸರಕಿನಲ್ಲಿ ಹಳೆಯ ಚಿತ್ರಗಳ ಹಾಸ್ಯ ದೃಶ್ಯಗಳಿಗೆ ಜಾಗವೇ ಇಲ್ಲ. ಒಂದಿಷ್ಟು ಕಲಾವಿದರನ್ನು ಒಳಗೊಂಡಿರುವ ಕೆಲವೇ ಸಂಗತಿಗಳು ಪದೇ ಪದೇ ಪ್ರಸಾರವಾಗುತ್ತವೆ. ನಮಗೆ ಅವರು ನೀಡಿದ್ದೇ ಮನರಂಜನೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಪ್ರಶಂಸನೀಯ 'ಸ್ಪರ್ಧಿ'

ಇತ್ತೀಚೆಗೆ ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ವಿದ್ಯಾಧರಿ ಎಂಬ ಗೃಹಿಣಿಯೊಬ್ಬರು ಮೂವರು ಸ್ಪರ್ಧಿಗಳಲ್ಲೊಬ್ಬರಾಗಿ ಪಾಲ್ಗೊಂಡಿದ್ದರು. ಅವರ ವಿಶೇಷವೇನು ಎಂದರೆ 'ನಾನು ಮೂಲತಃ ಆಂಧ್ರಪ್ರದೇಶದ ಹಿಂದೂಪುರದವಳು, ಸದ್ಯಕ್ಕೆ ಬೆಂಗಳೂರಿನಲ್ಲಿ ನೆಲೆಸಿದ್ದೇನೆ. ಕನ್ನಡ ಕಲಿಯುತ್ತಿದ್ದೇನೆ' ಎಂದು ಪರಿಚಯ ಮಾಡಿಕೊಂಡರು. ಮೂವರು ಸ್ಪರ್ಧಿಗಳಲ್ಲಿ ಈ ಕನ್ನಡ ಕಲಿಯುತ್ತಿರುವರಿಗೆ ಹೆಚ್ಚು ಅಂಕಗಳು ಬಂತು.

ಹೊರ ರಾಜ್ಯದಿಂದ ಬಂದಿದ್ದು, ಕನ್ನಡ ಕಲಿಯುತ್ತಿದ್ದು, ಕನ್ನಡ ಭಾಷೆ, ಚರಿತ್ರೆ, ಸಾಹಿತ್ಯದ ಬಗ್ಗೆ ತಿಳಿದುಕೊಂಡಿದ್ದಾರೆ. ಮಾತ್ರವಲ್ಲ ಅವರು ಸಂಕೋಚವಿಲ್ಲದೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಇಷ್ಟವಾಯಿತು.

ಹೊರ ರಾಜ್ಯಗಳಿಂದ ಇಲ್ಲಿಗೆ ಬಂದು 20–30 ವರ್ಷಗಳಿಂದ ಇಲ್ಲೇ ನೆಲೆಸಿದ್ದರೂ ಒಂದಕ್ಷರವೂ ಕನ್ನಡ ಕಲಿಯದೆ ಅವರವರ ಭಾಷೆಯಲ್ಲೇ ಮಾತನಾಡಿಕೊಂಡಿರುವವರ ನಡುವೆ ವಿದ್ಯಾಧರಿ ವಿಶಿಷ್ಟವಾಗಿ ಕಾಣಿಸುತ್ತಾರೆ. ಅವರ ಕನ್ನಡ ಪರ ಕಾಳಜಿ ಪ್ರಶಂಸಾರ್ಹ ಮತ್ತು ಅನುಕರಣೀಯ ಕೂಡ.

—ಶ್ರೀಧರ್, ಬೆಂಗಳೂರು

ವಾರದ ಪತ್ರ

## ವಿಶಿಷ್ಟ ಕನ್ನಡತಿ

ಕಲರ್ಸ್ ಕನ್ನಡದ 'ಕನ್ನಡತಿ' ಬಗ್ಗೆ ಬರುವ ಅನೇಕ ಪತ್ರಗಳನ್ನು ಗಮನಿಸುತ್ತಿರುವೆ. ಅದರಲ್ಲಿ ನನ್ನ ಅಭಿಪ್ರಾಯಗಳೂ ಹಲವು ಇವೆ ಎಂದೆನಿಸಿದೆ. ಇತ್ತೀಚೆಗೆ ಒಬ್ಬರು ಇಂಗ್ಲಿಷಿನಲ್ಲಿ ಹಾರೈಸಿದ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡತಿ ಧಾರಾವಾಹಿಯ ಅಪ್ಪಟ ಕನ್ನಡತಿಯರು ಇಬ್ಬರೇ! ರತ್ನಮಾಲಾ ಮತ್ತು ಭುವಿ. ಧಾರಾವಾಹಿಯ ಹೆಸರು ನೋಡಿ, ಪ್ರತಿಯೊಬ್ಬರೂ ಕನ್ನಡದಲ್ಲಿಯೇ ಮಾತನಾಡಬೇಕೆಂದು ನಿರೀಕ್ಷಿಸುವುದು ಎಷ್ಟರ ಮಟ್ಟಿಗೆ ಸರಿ. ಆ ಇಬ್ಬರು ಕನ್ನಡತಿಯರು ಮಾತ್ರ ಯಾವುದೇ ಒತ್ತಡ, ಹಟವಿಲ್ಲದೆ ಕನ್ನಡವನ್ನು ಬಳಸುತ್ತಾರೆ. ಕೊಂಚ ಹಿಂದಕ್ಕೆ ಹೋಗಿ ಭುವಿಯ ಮನೆಯಲ್ಲಿ ಹರ್ಷನ ಹುಟ್ಟುಹಬ್ಬಕ್ಕೆ ಕೇಕ್ ಮಾಡಿ ಭುವಿ ಹಾರೈಸಿದ್ದು ಅಚ್ಚ ಕನ್ನಡದಲ್ಲೇ 'ಹುಟ್ಟುಹಬ್ಬದ ಶುಭಾಶಯಗಳು' ಎಂದಿದ್ದನ್ನು ನೆನಪಿಸಿಕೊಳ್ಳಬೇಕು.

ರತ್ನಮಾಲಾ ಅವರು ಸಾನಿಯಳಿಗೆ ಎಂ.ಡಿ. ಪದವಿ ಬಿಟ್ಟುಕೊಟ್ಟ ಬಗ್ಗೆಯೂ ಟೀಕೆಗಳು ಬಂದವು. ಆದರೆ ಇತ್ತೀಚೆಗೆ ರತ್ನಮಾಲಾರ ಮುತ್ಸದ್ದಿತನವನ್ನು ಬಹಳ ಚೆನ್ನಾಗಿ ಚಿತ್ರಿಸಿದ್ದಾರೆ. ಈ ದೃಷ್ಟಿಯಿಂದ ಕನ್ನಡತಿ ವಿಶಿಷ್ಟವೆನಿಸುತ್ತದೆ.

—ಚಂದ್ರಕಾಂತ ಎಸ್. ಬೆಂಗಳೂರು

## ಬೇಸರ ತಂದಿದ್ದು 'ಸತ್ಯ'

ಝೀ ಟೀವಿಯ ನಿರಂತರ ಜಾಹೀರಾತು 'ಶೀಘ್ರದಲ್ಲೇ ಸತ್ಯ ಧಾರಾವಾಹಿ' ನೋಡಿ ನೋಡಿ ಅತೀ ಉತ್ಸಾಹದಿಂದ ಕಾಯುತ್ತಿದ್ದೆವು. ಪ್ರಾರಂಭವೂ ಆಯಿತು. ನಿರೀಕ್ಷೆ ಠುಸ್ ಆಯಿತು. ಗಂಡುಬೀರಿ ಪಾತ್ರ ಸೃಷ್ಟಿಸಿ, ಕೈಯಲ್ಲಿ ಸ್ಕ್ರೂ ಡ್ರೈವರ್ ಕೊಟ್ಟು ಡೈಲಾಗ್ ಹೊಡಿಸಿ, ಅಸಂಬದ್ಧ ಮಾತುಗಳಿಂದ ಬೇಸರ ಅನ್ನಿಸಿದೆ. ಮುಂದಿನ ಸಂಚಿಕೆಗಳಲ್ಲಿ ಹೊಸ ತಿರುವು ನೀಡಿ ನಮ್ಮ ಸಂಸ್ಕೃತಿಯ ಪ್ರತೀಕವಾಗಿ, ಸಮಾಜಮುಖಿಯಾಗಿ, ಯುವಪೀಳಿಗೆಗೆ ಒಂದಿಷ್ಟು ಮಾದರಿಯಾಗಿ ಬಿಂಬಿಸಲು ಮನಸ್ಸು ಮಾಡಲಿ. ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡಲಿ.

—ಕೆ.ಎನ್. ಶ್ವೇತ, ಬೆಂಗಳೂರು

## ವಸ್ತುನಿಷ್ಠವಾಗಿರಲಿ

ಇತ್ತೀಚೆಗೆ ರೈತರು, ಸಾರಿಗೆ ನೌಕರರು ಹೋರಾಟ ನಡೆಸಿದರು. ಸುದ್ದಿವಾಹಿನಿಗಳು ವಿಡಿಯೋ ಕ್ಲಿಪ್ಪಿಂಗ್ ತೋರಿಸುವಾಗ ಬರೀ ಪುನರಾವರ್ತನೆ ಮಾಡಿದರು. ಈ ವಿಚಾರದಲ್ಲಿ ಯಾವ ವಾಹಿನಿಯು ಹೊರತಾಗಿರಲಿಲ್ಲ. ಸತ್ಯಾಂಶಗಳನ್ನು ಬಿಂಬಿಸುವಲ್ಲಿ ವಿಫಲವಾಗುತ್ತಿವೆ. ವಸ್ತು ನಿಷ್ಠ ಸಂಗತಿಗಳನ್ನು ಮಾತ್ರ ನೀಡುವಲ್ಲಿ ವಾಹಿನಿಗಳು ಪ್ರಾಮಾಣಿಕತೆ ಮೆರೆಯಬೇಕು. ಈ ನಿಟ್ಟಿನಲ್ಲಿ ಸಾಮಾಜಿಕ ಹೊಣೆಗಾರಿಕೆ ಕಾಪಾಡಿಕೊಂಡು ಆರೋಗ್ಯವಂತ ಸಮಾಜಕ್ಕೆ ಕಾಣಿಕೆ ನೀಡಬೇಕು ಎನ್ನುವುದು ನಮ್ಮ ಮನವಿ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಕ್ರೌರ್ಯದ ಚಿತ್ರಣ

ಸ್ಟಾರ್ ಸುವರ್ಣದ 'ಸಂಘರ್ಷ'ಯ ಬಗ್ಗೆ ಬರೆಯಲು ಮನಸ್ಸಿಗೆ ನೋವಾಗುತ್ತದೆ. ಭೈರಾದೇವಿಯ ದ್ವೇಷ, ಅಸೂಯೆ, ಮೋಸ, ನಮಗೆ ಬೇಸರ ತರಿಸಿದೆ. ಮಗಳನ್ನು ನೆಡೆಸಿಕೊಳ್ಳುವ ರೀತಿ ಸ್ವಲ್ಪವೂ ಇಷ್ಟವಾಗಲಿಲ್ಲ.

ಅಸಿಸ್ಟೆಂಟ್ ಕಮೀಷನರ್, ಅನ್ಯಾಯದ ವಿರುದ್ಧ ಹೋರಾಟ ಮಾಡುವಾಗ ಲಾಯರ್, ಪೊಲೀಸ್ ಎಲ್ಲರೂ ಭೈರಾದೇವಿ ನೀಡುವ ಹಣದಾಸೆಗೆ, ಅವರನ್ನು ಬಲಿಪಶು ಮಾಡುತ್ತಿರುವುದು ಸರಿಯಲ್ಲ. ಅನೇಕ ಅಮಾನವೀಯ ಕೃತ್ಯಗಳು ಇದರಲ್ಲಿ ಬಂದಿವೆ. ಇದರಿಂದ ಒಳ್ಳೆಯ ಸಂದೇಶ ನೀಡಿದಂತೆ ಆಗುವುದಿಲ್ಲ.

—ಜಯಲಕ್ಷ್ಮಿ ಉಪಾಧ್ಯಾಯ ಕಂಚಾರ್ತಿ

## ತಿಳಿ ಹಾಸ್ಯಕ್ಕೆ ಒತ್ತು ನೀಡಿ

ಝೀ ಕನ್ನಡದಲ್ಲಿ 'ಕಾಮಿಡಿ' ಕಾರ್ಯಕ್ರಮ ಪ್ರಸಾರವಾಗುತ್ತಿದೆ. ತೀರ್ಪುಗಾರರಾಗಿರುವ ರಕ್ಷಿತಾ, ಜಗ್ಗೇಶ್, ಹಾಗೂ ಯೋಗರಾಜ್ ಭಟ್ ಅವರ ಟೀಕೆ ಟಿಪ್ಪಣಿ ಪ್ರಬುದ್ಧವಾಗಿರುತ್ತದೆ. ಕಲಾವಿದರು ಅದ್ಭುತವಾಗಿ ನಟಿಸಿ ಕೆಲವೊಮ್ಮೆ ಒಳ್ಳೆಯ ಸಂದೇಶವನ್ನೂ ನೀಡಿದ್ದಾರೆ. ಒಮ್ಮೊಮ್ಮೆ ಹಾಸ್ಯ ಅತಿರೇಕವಾಗಿ ಅಶ್ಲೀಲ ಪದಗಳನ್ನು ಪ್ರಯೋಗಿಸುತ್ತಾರೆ.

ಕುಟುಂಬದವರೊಂದಿಗೆ ಈ ಕಾರ್ಯಕ್ರಮ ನೋಡಲು ಮುಜುಗರ ತರುತ್ತದೆ. ಆದ್ದರಿಂದ ಹಾಸ್ಯಕ್ಕೆ ಒತ್ತು ನೀಡಿ ಅಶ್ಲೀಲ ಪದಗಳು ದೂರಾಗಲಿ. ಕಲಾವಿದರು ತಮ್ಮ ನಟನೆಯಿಂದ ನಮ್ಮನ್ನು ನಗಿಸುವಂತೆ ಆಗಲಿ. ಸಂಭಾಷಣೆಗೆ ಬಂದರೆ ತಿಳಿ ಹಾಸ್ಯಕ್ಕೆ ಒತ್ತು ನೀಡಿ. ಅನವಶ್ಯಕವಾಗಿ ಹೆಣ್ಣುಮಕ್ಕಳು ಗಂಡಸರನ್ನು ಹೊಡೆಯುವುದು ಗಂಡಸರು ಹೆಣ್ಣು ಮಕ್ಕಳ ಮೇಲೆ ಕೈ ಮಾಡುವ ದೃಶ್ಯಗಳು ಬೇಡ.

—ಎಂ.ಎಸ್. ಉಷಾ ಪ್ರಕಾಶ್ ಮೈಸೂರು